Doc 48
T-122

Reg No B G 155 27 — 5 — 72

55th Year of Publication ‘Satyavadi’ daily, Mysore 4

In the State – The First
Golden Jubilee
Celebrated Paper
★
News, Views, Dharmic
Moral Ethical Matters

ರಾಜ್ಯದಲ್ಲಿ ಪ್ರಥಮ
ಸುವರ್ಣ
ಮಹೋತ್ಸವ
ಸಂವೇರಿಸಿದ
ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ರಾಹಾನ್ ಗ್ರಾಮ ಖಾಲಿ – ಕುಟುಂಬದ ಕೊಲೆ

ತಮಿಳು ಸಂಘಗಳ ನಿರ್ಧಾರ

ಶ್ರೀಲಂಕದ 2 ಮಿಲಿಯ ತಮಿಳು ಮಾತನಾಡುವವರನ್ನು ಪ್ರತಿನಿಧಿಸುವ ತಮಿಳು ರಾಜಕೀಯ ಪಕ್ಷಗಳ ಸಂಯುಕ್ತ ರಂಗ ರಾಷ್ಟ್ರೀಯ ಸಭೆಯನ್ನು ಬಹಿಷ್ಕರಿಸಲು ಮತ್ತು ಹೊಸ ಗಣರಾಜ್ಯಕ್ಕೆ ಪ್ರತಿಜ್ಞಾವಿಧಿ ತಿರಸ್ಕರಿಸಲು ಕೊಲಂಬೋದಲ್ಲಿ ಸೇರಿ ನಿರ್ಧರ ಮಾಡಿದೆ.

★

ನಾಯಕರಲ್ಲಿ ಒಪ್ಪಂದ

ಆಯುಧಗಳ ಮಿತಿ ಮಾಡುವ ಬಗೆಗೆ ಅಧ್ಯಕ್ಷ ನಿಕ್ಸನ್ ಮತ್ತು ರಷ್ಯ ನಾಯಕ ಬ್ರಜ್ನೇವ್ ಇವರಲ್ಲಿ ಒಪ್ಪಂದವಾಯಿತೆಂದು ವಾಷಿಂಗ್ಟನ್ ವಾರ್ತೆ ತಿಳಿಸುತ್ತದೆ.

ಪುನರ್ವಿಮರ್ಶೆ

ಸಸ್ಪೆಂಡ್ ಮಾಡಿರುವ ಲೋಕೋಪಯೋಗಿ ಇಲಾಖೆಯ ಹದಿನಾರು ಇಂಜಿನಿಯರರ ವಿಚಾರವನ್ನು ಮುಖ್ಯ ಮಂತ್ರಿಯವರು ಪುನರ್ವಿಮರ್ಶೆ ಮಾಡುವರೆನ್ನಲಾಗಿದೆಯೆಂದು ಬೆಂಗಳೂರು ವಾರ್ತೆ ತಿಳಿಸುತ್ತದೆ.

★

ಬೆಲೆ ಇಳಿತದ ಚರ್ಚೆ

ಕೇರಳದಲ್ಲಿ ತೆಂಗಿನಕಾಯಿ, ಶುಂಠಿ, ಸೆಣಸು ಬೆಲೆ ತುಂಬಾ ಇಳಿದಿರುವ ಬಗ್ಗೆ ವ್ಯವಸಾಯ ಮಂತ್ರಿ ಶ್ರೀ ಶಿಂಧೆಯವರು ಕೇರಳದ ಪಾರ್ಲಿಮೆಂಟ್ ಸದಸ್ಯರೊಡನೆ ಮಾತುಕತೆ ನಡೆಸುವರು.

ಜವಾಹರಕ ಪುಣ್ಯ ದಿನ

ಈ ದಿನ ಶ್ರೀ ಜವಾಹರಲಾಲ್ ನೆಹರು ರವರ 8 ನೇ ಪುಣ್ಯ ದಿನ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಜವಾಹರರ ಗೌರವಾರ್ಥ ಶಾಂತಿವನದಲ್ಲಿ ನೆಹರು ಸಮಾಧಿಗೆ ಅನತಿ ದೂರದಲ್ಲಿ 9 ಮೀಟರು ಭೂಮಿಯೊಳಗೆ ಅನೇಕ ಕಾಗದ ಪತ್ರಗಳು ಮತ್ತು ಪದಾರ್ಥಗಳನ್ನೊಳಗೊಂಡ ನಲವತ್ತು ಸೆಂಟಿಮೀಟರು ಸುತ್ತಳತೆ ಹಾಗೂ ತೊಂಬತ್ತು ಸೆಂಟಿಮೀಟರು ಉದ್ದದ ಕ್ಯಾಪ್ಸೂಲ್ ಬಿಡುವರು. ಒಂದು ಸಾವಿರ ವರ್ಷದ ನಂತರ ಅದು ಸಿಕ್ಕಿದವರಿಗೆ ಇಂದಿನ ಭಾರತದ ಆರ್ಥಿಕ ಹಾಗೂ ರಾಜಕೀಯ ವಿಚಾರಗಳಲ್ಲಿ ತಿಳಿವಳಿಕೆ ಉಂಟಾಗುವುದು

★

ಯಶಸ್ವಿ ಹರತಾಳ

ಕೊಯಮತ್ತೂರಿನಿಂದ ಬಂದಿರುವ ವರದಿಯ ಪ್ರಕಾರ, ವಿದ್ಯುತ್ ದರ ಏರಿಕೆ ಪ್ರತಿಭಟಿಸಿ ಒಂದು ವಾರದಿಂದ ನಡೆಯುತ್ತಿರುವ ಚಳವಳಕ್ಕೆ ಬೆಂಬಲವಾಗಿ ಮತ್ತು ಚಳವಳಿಗಾರರ ಮೇಲೆ ಪೋಲೀಸರು ನಡೆಸಿದ ಪಬ್ಬಾಳಿಕೆಯನ್ನು ಪ್ರತಿಭಟಿಸಲು ಜಿಲ್ಲೆಯ ವ್ಯವಸಾಯ ಸಂಘ ಕರೆದಿದ್ದ ಹರತಾಳವು ಶುಕ್ರವಾರ ಯಶಸ್ವಿ ಆಗಿ ನೆರವೇರಿತು.

★

ಉನ್ನತ ಮಟ್ಟದ ಸಭೆ

ಭಾರತ ಮತ್ತು ಪಾಕೀಸ್ತಾನದ ಉನ್ನತ ಮಟ್ಟದ ಸಭೆ ಜೂನ್ ತಿಂಗಳು 24 ನೇ ತಾ|| ನಡೆಯುವುದಿದೆ.

★

54 ಜನರ ಬಂಧನ

ಪುರಾಲಿಯಾದಲ್ಲಿ ಸ್ಕೂಲ್ ಫೈನಲ್ ಪರೀಕ್ಷಾ ಕೇಂದ್ರದಲ್ಲಿ ಆದ ಗಲಭೆಯಲ್ಲಿ ಓರ್ವ ಉಪಾಧ್ಯಾಯ, ಓರ್ವ ರಾಜಕೀಯ ಪಕ್ಷದ ಕಾರ್ಯಕರ್ತ ಹಾಗೂ ವಿದ್ಯಾರ್ಥಿಗಳು ಸೇರಿ 54 ಮಂದಿ ಬಂಧಿತರಾಗಿದ್ದಾರೆ.

ಸಂಯುಕ್ತ ಚಳವಳಿ

ದೇಶದಲ್ಲಿ ಒಂದು ಪಕ್ಷಪಾತ ಸರ್ವಾಧಿಕಾರತೆಯನ್ನು ಎದುರಿಸಲು ಮಾರ್ಕ್ಸಿಸ್ಟ್ ಕಮ್ಯೂನಿಸ್ಟ್ ಪಕ್ಷವು ಇತರ ಪ್ರಜಾಪ್ರಭುತ್ವ ಹಾಗೂ ಪ್ರಗತಿಪರ ಶಕ್ತಿಗಳ ಸಂಗಡ ಚಳವಳಿ ಹೂಡಲು ಕಲ್ಕತ್ತಾಪಟ್ಟಿ ನಿರ್ಧರಿಸಿದೆ.

ಭೀಕರ ಕೊಲೆ

ರಾಂಚಿಯಿಂದ ಬಂದಿರುವ ವರದಿಯ ಪ್ರಕಾರ ಒಂದು ಕುಟುಂಬದ 7 ಮಂದಿ ರಾಹಾರ್ ಗ್ರಾಮದಲ್ಲಿ ಕೊಲೆ ಆಗಿರುವರು. ಭೂಮಿಗೆ ಸಂಬಂಧಿಸಿದ ಕಲಹ ಕೊಲೆಗೆ ಕಾರಣ ಎನ್ನಲಾಗಿದೆ. ಇತರ ಗ್ರಾಮಸ್ಥರೆಲ್ಲರೂ ಗ್ರಾಮದಿಂದ ಓಡಿಹೋಗಿರುವರು.

ಮೈಸೂರು ಡಿ. ಸುಬ್ಬಯ್ಯಾ ಶಸ್ತ್ರೀಲಿರುವ
ಡಾ|| ಬಿ. ಜಿ. ದಾಸ್‌ರವರ ಹೊಸ ಫೋನ್
ನಂ. 2-3142

ಆಯುಧ ಅಭಿವೃದ್ಧಿ

ನ್ಯೂಯಾರ್ಕಿನಿಂದ ಬಂದಿರುವ ಹಕದಿ ಪ್ರಕಾರ, ಸರ್ವ ಸೇನೆ ಹಾಗೂ ಈಗಿನ ಪರಮಾಣು ಆಯುಧಗಳನ್ನು ನಿರುಪಯೋಗ ಮಾಡುವಂತಹ ನಿರ್ಣಾಮಕಾರಿ ಅತಿ ಶಕ್ತಿಯುತವಾದ ಆಯುಧವನ್ನು ಅಮೇರಿಕಾ ಅಭಿವೃದ್ಧಿಗೊಳಿಸುತ್ತಿದೆಯೆಂದು ಪ್ರಕಟವಾಗಿದೆ.

★

ನಾಮಕರಣ

ಮೈಸೂರು 26

ಮೈಸೂರು ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರವರ ಮೂರನೆಯ ರಾಜಪುತ್ರಿ ಶ್ರೀಮತಿ ಕಾವೇರಿ ಪ್ರಿಯದೇವಿ ಅತ್ಯನ್ಯದೇವ್‌ರವರ ರಾಜಶಿಶುವಿಗೆ ನಿನ್ನೆ ಮೈಸೂರು ಅರಮನೆಯಲ್ಲಿ ಶ್ರೀಮನ್ಮಹಾರಾಜರ ಸಮ್ಮುಖದಲ್ಲಿ ಶ್ರೀ ರಾಜಕುಮಾರ್ ಶ್ರೀ ಉಪಮನ್ಯದೇವ್ ಎಂದು ವೈಭವದಿಂದ ನಾಮಕರಣಮಾಡಲಾಯಿತು.

ವುಡ್‌ಲ್ಯಾಂಡ್ 26-5-72ರಿಂದ ಆಮೋಘ 4 ನೇ ವಾರ
.... ಚಿತ್ರತಾರ್ಕ ಕನ್ನಡ ಚಿತ್ರ ....
ಹೃದಯ ಸಂಗಮ
ನಟಸಾರ್ವಭೌಮ ರಾಜಕುಮಾರ್, ಭಾರತಿ, ಬಾಲಕೃಷ್ಣ, ಅಶ್ವತ್ಥ್, ಪಂಡರಿಬಾಯಿ
ನಿರ್ದೇಶನ: ರಾಶಿ ಸಹೋದರರು ನಿರ್ಮಾಪಕರು: ಎಂ ಜೆ ಎಂ ಸಹೋದರರು
ಪ್ರತಿ ದಿನ 3 ಪ್ರದರ್ಶನಗಳು
ಬೆಳಗಿನ ಪ್ರದರ್ಶನ ಪ್ರತಿ ದಿನ 10-30 ಚದುರಂಗ

ಅಪೇರಾ 26 5 72 ರಿಂದ
ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ [ವಯಸ್ಕರಿಗೆ ಮಾತ್ರ]
ಜರೂರತ್
ಪಾತ್ರ– ರಿನ ರಾಯ್, ವಿಜಯ ಅರೋರ, ಅಸಿತ್ ಸೇನ್, ಹುನಸೆಹಾಹನ ಕೃಷ್ಣ
ಜಾನಿ ವಿಸ್ಕಿ, ಡಾನಿಡೆ ಜೊಪ್ಪ
ನಿರ್ದೇಶನ– ಬಿ. ಆರ್. ಇಶಾರ ಸಂಗೀತ–ಬ್ರಿಜ್ ಭೂಷಣ್
ದಿನ 3 ಆಟಗಳು

ಮರೆಯಲಾಗದ ಮೇ

★

ಮೇ ತಿಂಗಳನ್ನು ಮರೆಯುವುದು ಬಹಳ ತಪ್ಪು. ಮೇ ಮೊದಲ ದಿನವನ್ನು ಮೇ ದಿನವೆಂದು ಕೆಲವರು ಆಚರಿಸುವದಿದೆ : ಕಾರ್ಖಾನೆಯಲ್ಲಿ ರಜಾದಿನ ಅಂದು ಅನೇಕ ಕತೆಗಳಲ್ಲಿ ಅಮೇರಿಕಾದಲ್ಲಿ ಕೆಲವು ಕಾರ್ಮಿಕರು ಮಾಲಿಕರ ಕ್ರೂರ ದಬ್ಬಾಳಿಕೆಗೆ ವಿರುದ್ಧ ಬಂಡೆದ್ದ ದಿನವದು. ಅಮೇರಿಕಾದಲ್ಲಿ ಅದಕ್ಕೆಂದು ಮಹತ್ವವಿಲ್ಲ ; ರಷ್ಯಾ ಅದನ್ನು ಆಚರಿಸುತ್ತದೆ ; ಅಂತೆಯೇ ಇಲ್ಲಿಗೂ ಅದರ ಗಾಳಿ ಬೀಸಿದೆ.

ಮೇ ೨೪ನೇ ಹತ್ತು 1857 : ಬ್ರಿಟಿಷ್ ದಬ್ಬಾಳಿಕೆಯ ವಿರುದ್ಧ ಭಾರತೀಯರು ಸಿಡಿದೆದ್ದ ದಿನವದು ; ಕೆಲವರ ಕಾರಣಗಳಿಂದಾಗಿ ನಾವು ಸೋಲನ್ನಪ್ಪಿಕೊಳ್ಳಬೇಕಾದರೂ, ಭಾರತೀಯರನ್ನೆಂದು ಒಂದಾಗಿಸಿದ ಬಿಂದು ಯಾವದೆಂಬುದನ್ನು ಇಂದಿನ ಬಿಕ್ಕಟ್ಟಿನ ದಿನಗಳಲ್ಲಿ ಯೋಚಿಸಬೇಕಾಗಿದೆ. ಎಲ್ಲಾ ಹಿಂದೂಗಳು, ಮುಸ್ಲಿಂರೂ, ಇತರರೂ ಗೋಹತ್ಯೆಗೆದುರಾಗಿ ಭಗವಾಧ್ವಜದಡಿಯಲ್ಲಿ ಒಂದಾಗಲಿ. ಪಶುವಧೆಯನ್ನು ಸಹಿಸಿಕೊಳ್ಳಲು ಭಾರತೀಯರು ಸಿದ್ಧರಿಲ್ಲ ಬ್ರಿಟಿಷರು ಪಶುವಧೆ ನಡೆಸುವದು ಮಾತ್ರವಲ್ಲ, ಮತಾಂತರಕ್ಕಾಗಿ ಅವರ ಮತಪ್ರಸಾರಕರ ಮೂಲಕ ಹಿಂದೂಗಳಿಗೆ ಗೋಮಾಂಸ ತಿನ್ನಿಸುತ್ತಿದ್ದರೆಂದು ಭಾರತೀಯರು ಅದನ್ನೆದುರಿಸಲು ಒಂದಾದರು ವಿಭಜನೆ, ಪೃಥಕ್ಕೀಕರಣದ ಭಯಂಕರ ಕೂಗು ಕೇಳಿಬರುತ್ತಿರುವಾಗ ಹಸು ಚಿಹ್ನೆ ಹಿಡಿದುಕೊಂಡಿರುವ ಅಡಳಿತ ಪಕ್ಷ ರಾಷ್ಟ್ರೀಯ ಐಕ್ಯಕ್ಕಾಗಿ ಪಶುವಧೆಯನ್ನು ಪ್ರತಿಬಂಧಿಸಿ, ಪರಮಪವಿತ್ರ ಭಗವಧ್ವಜವನ್ನು ಪುನಃ ರಾಷ್ಟ್ರಧ್ವಜವಾಗಿ ಘೋಷಿಸಿ ಪುಣ್ಯಕಟ್ಟಿಕೊಳ್ಳಬಹುದು.

ತನ್ಮದು ಕಾರ್ಮಿಕರ, ಶ್ರಮಿಕರ ಸರ್ಕಾರವೆಂದು ಭಾರತರತ್ನ ಡಾ|| ಇಂದಿರಾ ಗಾಂಧಿಯವರು ಹೋದಲ್ಲೆಲ್ಲಾ ಹೇಳುತ್ತಿದ್ದಾರೆ. ಒಳ್ಳೆಯದು. ಮೇ ದಿನಗಳಲ್ಲಿ ಬಿಸಿಲಿನ ಬೇಗೆ ಜಾಸ್ತಿ ಇರುತ್ತದೆ. ಸೂರ್ಯತಾಪದಿಂದಾಗಿ ಜನರು ಸತ್ತು ಹೋದ ಬಗ್ಗೆ ಸನ್ನಾಚಾರ ಪತ್ರಿಕೆಗಳಲ್ಲಿ ಪ್ರಕಟವಾಗುತ್ತದೆ. ಇದನ್ನು ಬಗೆಹರಿಸಲು ಸಾಧ್ಯವಿಲ್ಲವೇನು ? ಹಿಂದಿನ ಕಾಲದಲ್ಲಿ ಅಲ್ಲಲ್ಲಿ ನೀರುಕಟ್ಟೆಗಳನ್ನು ಕಟ್ಟಿ ಪ್ರಯಾಣಿಕರಿಗೆ ಬಾಯಾರಿಸಿಕೊಳ್ಳಲು ನೀರು, ಇನ್ನು ಕೆಲವೆಡೆಗಳಲ್ಲಿ ಶೀತಲಾಂಜ್ಜಿಗೆಯನ್ನು ಕೊಡುತ್ತಿದ್ದರು ಬೆಸಿಲಿನ ತಾಪದಿಂದ ಕಂಗೆಡದಂತಾಗಲು ಮಜ್ಜಿಗೆ ಅಮೃತ ಸಮಾನವಿದೆ ಆ ಮಜ್ಜಿಗೆಗೆ ಗೋಸಂಪತ್ತು ಅಗತ್ಯ. ಪಶುವಧೆಯನ್ನು ತಡೆಗಟ್ಟಿ ಗೋರಕ್ಷಣೆಗೆ ಹುಲುಗಾವಲಿನ ಏರ್ಪಾಡುಮಾಡಿಕೊಟ್ಟಲ್ಲಿ ಅಂಥವರನ್ನು ಬಡವರ ಬಂಧುಗಳೆನ್ನಬಹುದು ಬಡವರಿಗೆ ಶೈತ್ಯಾಗಾರಾದಿಗಳನ್ನು ಹೊಂದಲು ಸಾಧ್ಯ ಇರುವುದಿಲ್ಲ : ಬೆಲೆ ಬಾಳುವ ತಂಪು ಪಾನೀಯಗಳಿಗಾಗಿ ಹಣ ಖರ್ಚು ಮಾಡಲೂ ಸಾಧ್ಯ ಇರುವುದಿಲ್ಲ. ಹಾಗಿರುವಾಗ ಅವರ ಪ್ರಾಣ, ಆರೋಗ್ಯವನ್ನುಳಿಸಲಿಕ್ಕಾಗಿ ಸಮಾಜವಾದಿಯೆಂದು ಸಾರಿಕೊಳ್ಳುವ ಸರಕಾರ ಒಡನೆ ಗೋಹತ್ಯವನ್ನು ಪ್ರತಿಬಂಧಿಸಲೇಬೇಕು.

ಪ್ರಚಲಿತ ಸರಕಾರ ಬುದ್ಧ ಪೂರ್ಣಿಮೆಗೆ ವಿಶೇಷ ಮಹತ್ವವನ್ನು ನೀಡುತ್ತದೆ. ಬುದ್ಧಪೂರ್ಣಿಮೆ ಇದೇ ತಿಂಗಳಲ್ಲಿ ಇರುತ್ತದೆ ಅಷ್ಟೇ ಅಲ್ಲ; ಶಿವಾಜಿಮಹಾರಾಜರು ಶಂಕರಾಚಾರ್ಯರು ಇದೇ ತಿಂಗಳಲ್ಲಿ ಹುಟ್ಟಿರುವರು ; ಪರಶುರಾಮ ಜಯಂತಿ, ನರಸಿಂಹ ಜಯಂತಿಯೂ ಇದೇ ತಿಂಗಳಲ್ಲಿ. ಇವೆಲ್ಲಕ್ಕೂ ಮಿಗಿಲು ಕೊಡುವಂತೆ ನಮ್ಮ ಜನತಾ ಸರಕಾರ ಇದೇ ತಿಂಗಳಲ್ಲಿ ಪಶುವಧೆಯನ್ನು ಪ್ರತಿಬಂಧಿಸಿದಲ್ಲಿ ನಿಜವಾಗಿಯೂ ಇದು ಮರೆಯಲಾಗದ ಮೇ ಆಗುತ್ತದೆ. — ಶಿವಶಂಕರ

ಸೊಳ್ಳೆ ಪರದೆಗಳು

ಬ್ಯಾಂಕ್ ರೋಡ್ ಬಾಹುಸಾರ್, ಕಂಪೆನಿಯಲ್ಲಿ ನಿಗುತ್ತವೆ

ನ್ಯಾಯವಾದ ಬೆಲೆ

A Fair price Shop in Actual practice

Protect the Cow

SHAKTI SUDHA

A Superb Tonic

Contribute Liberally

to the National Defence Fund

Quality Printing Neat Binding

Lakshminarasimha Press

Sivarampet, Mysore

Help The Gorakshana



— Humanitarian Propoganda Monthly ....

ಅಖಿಲ ಭಾರತದಲ್ಲಿ ಕೂಡಲೇ ಗೋವಧೆ ನಿಷೇಧವಾಗಲಿ

Edited Printedand Published by Dharmapracharanirata M S Krishna Rao (Propretor) at the Satvavadi Press Chamarajapuram Mysore 4